**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪಿರಿಯಾಪಟ್ಟಣ.**

**ಸಿ.ಸಿ. ಸಂಃ 1021/2019**

| | | |
|---|---|---|
| ಸಾಕ್ಷಿಯ ಹೆಸರುಃ | ಸೌಮ್ಯ | ಫ್ರಾಸಾಃಃ 7 |
| ಗಂಡನ ಹೆಸರುಃ | ಮಧು | ಚಾಸಾಃಃ 6 |
| ವಯಸ್ಸುಃ | 32 ವರ್ಷ | ಪ್ರಮಾಣೀಕರಿಸಿದ<br>ದಿಃ 08/04/2025 |
| ಉದ್ಯೋಗಃ | ಗೃಹಿಣಿ | |
| ವಾಸ ಸ್ಥಳಃ | ಸೂಳೇಕೋಟೆ ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಚಾಸಾ–1 ರಿಂದ 5 ರವರ ಪರಿಚಯ ಇದೆ. ನನಗೆ ಆರೋಪಿತರು ಗೊತ್ತು.

2. ದಿಃ11/04/2017 ರಂದು ಮಧ್ಯಾಹ್ನ 12.00 ಗಂಟೆಗೆ ನಾನು ನಮ್ಮ ಮನೆಯ ಬಳಿ ಇದ್ದೆ. ಆಗ ಚಾಸಾ–1 ರಿಂದ 3 ರವರು ಅವರ ಮನೆಯ ಬಳಿ ಕುಳಿತಿದ್ದರು. ಆ ಸಮಯಕ್ಕೆ ಒಂದು ಕಪ್ಪು ಬಣ್ಣದ ಕಾರು ಬಂದಿದ್ದು, ಅದರಲ್ಲಿ ಆರೋಪಿತರು 6 ಜನ ಬಂದು, ಚಾಸಾ–1 ರವರಿಗೆ ಮನೆ ಖಾಲಿ ಮಾಡುವಂತೆ ಹೇಳಿದರು. ಚಾಸಾ–1 ಮತ್ತು 2 ರವರು ನಾವು ಏಕೆ ಮನೆ ಖಾಲಿ ಮಾಡಬೇಕೆಂದು ಕೇಳಿದಾಗ, 1 ಮತ್ತು 2 ನೇ ಆರೋಪಿತರು ಸೂಳೇಮುಂಡೇರಾ, ಬೇವರ್ಸಿ ಮುಂಡೇರಾ ಮನೆ ಖಾಲಿ ಮಾಡಿ ಎಂದು ಬೈದರು. ಚಾಸಾ–1 ಮತ್ತು 2 ರವರು ನಾವು ಏಕೆ ಮನೆ ಖಾಲಿ ಮಾಡಬೇಕೆಂದು ಕೇಳಿದಾಗ 4 ನೇ ಆರೋಪಿತ ಬಿದಿರು ದೊಣ್ಣೆಯಿಂದ ಚಾಸಾ–1 ರವರ ಬಲಗಾಲು ಮತ್ತು ಬಲಗೈಗೆ ಹೊಡೆದರು. ಅದನ್ನು ಚಾಸಾ–2 ರವರು ಕೇಳಿದಾಗ 1 ರಿಂದ 3 ನೇ ಆರೋಪಿತರು ಅವರನ್ನು ಎಳೆದುಕೊಂಡು ಬಂದು, ಕೆಳಗೆ ಬೀಳಿಸಿ, 1 ಮತ್ತು 2 ನೇ ಆರೋಪಿತರು ಕಾಲಿನಿಂದ ಚಾಸಾ–2 ರವರ ಹೊಟ್ಟೆಯನ್ನು ತುಳಿದು, ತಿಪ್ಪೆಗುಂಡಿಗೆ ನೂಕಿದರು. 1 ಮತ್ತು 2 ನೇ ಆರೋಪಿತರು ಚಾಸಾ–2 ರವರನ್ನು ನಡುರಸ್ತೆಗೆ ಎಳೆದುಕೊಂಡು ಬಂದು ಮಾನಭಂಗ ಮಾಡುತ್ತೇವೆಂದು 1 ನೇ ಆರೋಪಿತ ಚಾಸಾ–2 ರವರ ನೈಟಿಯನ್ನು

ಹರಿದುಹಾಕಿದರು. ಚಾಸಾ–3 ರವರು ಕೇಳಲು ಬಂದಾಗ 5 ಮತ್ತು 6 ನೇ ಆರೋಪಿತರು ಚಾಸಾ–3 ರವರಿಗೆ ಕಲ್ಲಿನಿಂದ ಸೊಂಟಕ್ಕೆ ಮತ್ತು ಕಾಲಿಗೆ ಹೊಡೆದರು. ನಂತರ ಚಾಸಾ–4 ರವರು ನನ್ನ ತಂದೆಗೆ ಏಕೆ ಹೊಡೆಯುತ್ತೀರಿ ಎಂದು ಕೇಳಿದಾಗ 3, 5 ಮತ್ತು 6 ನೇ ಆರೋಪಿತರು ಚಾಸಾ–4 ರವರಿಗೆ ಕೈಯಿಂದ ಹೊಡೆದು, ತಿಪ್ಪೆಗುಂಡಿಗೆ ನೂಕಿದರು. ನಂತರ ನಾನು ಕೇಳಲು ಹೋದಾಗ ಆರೋಪಿತರು ಕೊಲೆ ಮಾಡುತ್ತೇನೆಂದು ಹೆದರಿಸಿ, ಕಾರಿನಲ್ಲಿ ಹೊರಟುಹೋದರು. ಚಾಸಾ–4 ರವರು ಆ್ಯಂಬುಲೆನ್ಸಿಗೆ ಫೋನ್ ಮಾಡಿ ಚಾಸಾ–1 ರಿಂದ 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಈ ಸಂಬಂಧ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

3. ಕಲ್ಲು, ದೊಣ್ಣೆ ಮತ್ತು ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಲ್ಲು, ದೊಣ್ಣೆ ಮತ್ತು ನೈಟಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಕೆ.ಆರ್.ವಿ ವಕೀಲರಿಂದಃ**

4. ಚಾಸಾ–1 ರಿಂದ 3 ರವರು ನನ್ನ ಜಾತಿಯವರು. 1 ರಿಂದ 3 ನೇ ಆರೋಪಿತರು ನನ್ನ ಚಿಕ್ಕ ಮಾವನ ಮಕ್ಕಳು. 4 ರಿಂದ 6 ನೇ ಆರೋಪಿತರು ನಮ್ಮ ಸಂಬಂಧಿಕರು. 2 ನೇ ಆರೋಪಿತ 7 ವರ್ಷಗಳಿಂದ ಸ್ಪೈನಲ್ ಕಾರ್ಡ್ ಆಪರೇಷನ್ ಆಗಿ ಊರುಗೋಲನ್ನು ಇಟ್ಟುಕೊಂಡು ಓಡಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ಮತ್ತು 6 ನೇ ಆರೋಪಿತರು 70 ವರ್ಷದ ವಯೋವೃದ್ಧರು ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಚಾಸಾ–1 ರವರ ಮಧ್ಯೆ ಸಿವಿಲ್ ದಾವೆ ಇದೆ ಎಂದರೆ ಸರಿ. ಹಲವಾರು ಬಾರಿ ಅವರ ಮಧ್ಯೆ ಜಗಳವಾಗಿ ಪೊಲೀಸ್ ಠಾಣೆಯಲ್ಲಿ ರಾಜೀಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ–1 ರವರನ್ನು ಸೂಳೇಕೋಟೆ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ಚಾಸಾ–1 ರವರು ಕುಶಾಲನಗರ ತಾಲ್ಲೂಕು, ಶಿರಂಗಾಲ ಗ್ರಾಮಸ್ಥರು ಎಂದು ಅವರ ಹೆಸರಿನಲ್ಲಿ ದಾಖಲೆ ಇದೆ ಎಂದರೆ ಸರಿಯಲ್ಲ. ಗಲಾಟೆಯಾದಾಗ ನಾನು ಮನೆಯಲ್ಲಿದ್ದೆ. ನಮ್ಮ ಮನೆ ಮುಂದೆ ಇರುವ ರಸ್ತೆ ದಾಟಿದರೆ ಚಾಸಾ–1 ರವರ ಮನೆ ಇದೆ. ಸಿವಿಲ್ ದಾವೆ ಆರೋಪಿತರ ಪರವಾಗಿ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ.

5. ಆರೋಪಿತರು ಚಾಸಾ–1 ರಿಂದ 3 ರವರ ವಿರುದ್ಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ–1 ರಿಂದ 3 ರವರ ಮತ್ತು ಆರೋಪಿತರ ಅಕ್ಕಪಕ್ಕದ ಮನೆಯವರ ಹೆಸರು ಗೊತ್ತಿಲ್ಲ. ಘಟನಾ ಸ್ಥಳದ ಚಕ್ಕುಬಂದಿ ಗೊತ್ತು. ಪೂರ್ವ–ಪಶ್ಚಿಮ, ಉತ್ತರ–ದಕ್ಷಿಣ ಚಕ್ಕುಬಂದಿ ಗೊತ್ತಿಲ್ಲ. ಗಲಾಟೆಯಾದ ಎರಡು ದಿನಗಳ ನಂತರ ಹೇಳಿಕೆ ನೀಡಿದ್ದೇನೆ, ಅದರ ನಿಖರವಾದ ದಿನಾಂಕ ಗೊತ್ತಿಲ್ಲ. ನನ್ನ ಹೇಳಿಕೆಯನ್ನು ಪೊಲೀಸರು ಕೈಬರವಣಿಗೆಯಲ್ಲಿ ಬರೆದುಕೊಂಡರು. ಸದರಿ ಹೇಳಿಕೆಯಲ್ಲಿ ಆರೋಪಿತರಿಗೂ ಮತ್ತು ಪಿರ್ಯಾದುದಾರರಿಗೂ ಹಳೆಯ ದ್ವೇಷ ಇತ್ತೆಂದು ತಿಳಿಸಿಲ್ಲ. ಮೀನಾಕ್ಷಿಯವರ ಮನೆಯ ವಿಚಾರಕ್ಕೆ ಗಲಾಟೆಯಾಯಿತು. ಆ ಮನೆಯು ಮೀನಾಕ್ಷಿ ಯವರಿಗೆ ಸೇರಿದ್ದು. ಅದರ ಜಂಜರ್ ನಂಬರ್, ಅಸ್ಸೆಸ್ಮೆಂಟ್ ನಂಬರ್ ಗೊತ್ತಿಲ್ಲ.

6. ಚಾಸಾ–2 ರವರ ನೈಟಿಯನ್ನು ಹಿಡಿದು ಎಳೆದಾಡುವಾಗ ನಾನು ಸ್ಥಳಕ್ಕೆ ಹೋದೆ. ಮುದ್ದೇಮಾಲುಗಳನ್ನು ಪೊಲೀಸರಿಗೆ ಯಾರು ನೀಡಿದ್ದಾರೆಂದು ನನಗೆ ಮಾಹಿತಿ ಇಲ್ಲ. ಕಪ್ಪು ಬಣ್ಣದ ಜೀಪಿನ ಸಂಖ್ಯೆ ಗೊತ್ತಿಲ್ಲ. ಜೀಪನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಮಧ್ಯಾಹ್ನ 12.00 ಗಂಟೆಗೆ ನಾನು ಸ್ಥಳಕ್ಕೆ ಹೋದೆ. ಮಧ್ಯಾಹ್ನ 12.00 ಗಂಟೆಗೆ ಜೀಪು ಬಂದಿದ್ದು ಮತ್ತು ಕೂಗಾಟದ ಶಬ್ದ ಕೇಳಿಸಿತು. ನಾನು ಒಂದು ರಸ್ತೆಯನ್ನು ದಾಟಿ ಘಟನಾ ಸ್ಥಳಕ್ಕೆ ಹೋಗಬೇಕಾಗಿತ್ತು. ನಮ್ಮ ಮನೆಗೂ ಘಟನಾ ಸ್ಥಳಕ್ಕೂ 20 ಅಡಿ ಅಂತರ ಇದೆ. ನಾನು ಸ್ಥಳಕ್ಕೆ ಹೋದಾಗ 100–150 ಜನ ಸೇರಿರಬಹುದು. ಅವರ ಹೆಸರು, ವಿಳಾಸ ನನಗೆ ಗೊತ್ತಿಲ್ಲ. ದೂರುದಾರರ ಕಡೆಯವರು ಮತ್ತು ಆರೋಪಿತರ ಕಡೆಯವರು ಯಾರ್ಯಾರು ಇದ್ದರು ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆರೋಪಿತರು ಮಾತ್ರ ಇದ್ದುದ್ದು ಗೊತ್ತು ಎಂದು ನುಡಿಯುತ್ತಾರೆ.

7. ಜಿಲ್ಲಾ ನೊಂದಣಾಧಿಕಾರಿಯವರ ಕಚೇರಿಯಲ್ಲಿ ಆರೋಪಿತರು ದೂರುದಾರರ ವಿರುದ್ಧ ಸವಿತ ಸಮಾಜದ ಸಂಬಂಧ ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. (ಈ ಹಂತದಲ್ಲಿ ಮಾನ್ಯ ಸರ್ಕಾರ ಅಭಿಯೋಜಕರು ಸದರಿ ಪ್ರಶ್ನೆ ಕೇಳಲು ಬರುವುದಿಲ್ಲವೆಂದು ತಕಾರಾರು ಮಾಡಿರುತ್ತಾರೆ. ತಕರಾರಿಗೆ ಒಳಪಟ್ಟು ಸದರಿ ವಾಕ್ಯವನ್ನು ರಚಿಸಲಾಯಿತು) ನಾನು ಸ್ಥಳಕ್ಕೆ ಹೋದ ನಂತರ ಆರೋಪಿತರು ಜೀಪು ಹತ್ತಿ ಹೋಗುತ್ತಿದ್ದರು. ಜೀಪಿನ ಮುಂದಿನ ಸೀಟಿನಲ್ಲಿ ಮತ್ತು

ಹಿಂದಿನ ಸೀಟಿನಲ್ಲಿ ಯಾರು ಕುಳಿತಿದ್ದರು ಎಂದು ನಾನು ಗಮನಿಸಿಲ್ಲ. ಕೊಲೆ ಬೆದರಿಕೆ ಹಾಕಿದ್ದನ್ನು ನಾನೇ ಕೇಳಿಸಿಕೊಂಡೆ. ಚಾಸಾ–1 ರವರು ಕೊಟ್ಟ ಮಾಹಿತಿ ಮೇರೆಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಣ್ಣಾರೆ ನೋಡಿದ್ದನ್ನು ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. 2019 ರಲ್ಲಿ ಚಾಸಾ–1 ರವರು ನೀಡಿದ ದೂರಿನಲ್ಲಿ ನಾನು ಪ್ರತ್ಯಕ್ಷ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ–1 ಮತ್ತು ನಾನು ಹತ್ತಿರದ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಚಾಸಾ–1 ರಿಂದ 3 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ದೂರುದಾರರಿಗೂ ಸಿವಿಲ್ ವ್ಯಾಜ್ಯ ಇರುವುದರಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ ಮತ್ತು ಮಾನಭಂಗ ಮಾಡಲು ನೈಟಿ ಹರಿದುಹಾಕಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ನಷ್ಟ ಉಂಟುಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**